International Journal of Kannada Research 2020; 6(1): 83-84

International Journal of Kannada Research
www.kannadajournal.com

**ISSN: 2454–5813**
IJKR 2020; 6(1): 83-84
© 2020 IJKR
www.kannadajournal.com
Received: 10-11-2019
Accepted: 12-12-2019

**Gouthama MA**
Second Year M.com Students,
Mysore University, Mysuru,
Karnataka, India

**Corresponding Author:**
**Gouthama MA**
Second Year M.com Students,
Mysore University, Mysuru,
Karnataka, India

# ಶ್ರೀ ಹರಿಯ ಸಂದೇಶ ರವಾನಕ ಭಕ್ತ ಕನಕದಾಸ

## Gouthama MA

**ಆಮೂರ್ತ**: ದಾಸಪರಪಂರೆಯಲ್ಲಿ ಬರುವ ೨೫೦ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರು ಒಬ್ಬರು. ಕರುನಾಡಿನಲ್ಲಿ ೧೫ ಮತ್ತು ೧೬ನೇ ಶತಮಾನದಲ್ಲಿ ಜನಪ್ರಿಯವಾದ ಭಕ್ತಿಪಂಥದ ಮುಖ್ಯರಾದ ಪುರಂದರದಾಸರು ಮತ್ತು ಕನಕದಾಸರು, ಇವರುಗಳು ದೇವರನ್ನು ಕಾಣಲು ತಮ್ಮದೇ ಆದ ಸಂಗೀತದ ಮೂಲಕ ದಾಸ ಸಾಹಿತ್ಯಕ್ಕೆ ನಾಂದಿಹಾಡಿ, ತಮ್ಮದೇ ಕೀರ್ತನೆಗಳ ಮೂಲಕ ಭಕ್ತಿಮಾರ್ಗಕ್ಕೆ ದಾರಿದೀಪವಾದರು. ಇದರ ಮೂಲಕ ಭಕ್ತಿಪಂಥಕ್ಕೆ ಅನರ್ಘ್ಯ ಕೊಡುಗೆಯನ್ನು ನೀಡಿ ದಾಸಸಾಹಿತ್ಯದ ಶ್ರೇಷ್ಠರಾದರು.

**ಮುಖ್ಯಪದಗಳು**: ಅನರ್ಘ್ಯ, ದಾಸ ಸಾಹಿತ್ಯ, ಭಕ್ತಿಪಂಥ, ಸಂಗೀತ, ಕೀರ್ತನೆ.

**ಪೀಠಿಕೆ**

ಕನಕದಾಸರು ೧೫೦೬–೧೬೦೬ ರ ಕಾಲದಲ್ಲಿ ಇದ್ದವರು. ಬೀರಪ್ಪ ಮತ್ತು ಬಚ್ಚಮ್ಮನ ಮಗನಾಗಿ ಬಾಡ (ಹಾವೇರಿ ಜಿಲ್ಲೆ) ಜನಿಸಿದರು. ಇವರ ಜನ್ಮನಾಮ ತಿಮ್ಮಪ್ಪನಾಯಕ. ಜಾತಿಯಲ್ಲಿ ಕುರುಬ ಜನಾಂಗಕ್ಕೆ ಸೇರಿದ ಇವರು ಆ ಜನಾಂಗದ ಮೊದಲ ದಾಸರು. ಮೊದಲು ವೃತ್ತಿಯಲ್ಲಿ ಸೈನಿಕರಾಗಿದ್ದರು. ಒಮ್ಮೆ ಯುದ್ಧದಲ್ಲಿ ಹೆಚ್ಚು ಗಾಯವಾಗಿ ಬೇಸರಗೊಂಡು ತಮ್ಮ ಕೆಲಸವನ್ನು ಬಿಟ್ಟು ದೇವರ ನಾಮವನ್ನು ಮಾಡುತ್ತಾ ವ್ಯಾಸರಾಜರ ಶಿಷ್ಯವೃತ್ತಿಯನ್ನು ಪಡೆದು ಶ್ರೀವೈಷ್ಣವ ಪಂಥವನ್ನು ಅವಲಂಬಿಸಿ ಆದಿಕೇಶವನನ್ನು ಆರಾಧ್ಯ ದೈವವನ್ನಾಗಿ ಮಾಡಿ ತಮ್ಮ ಅಂಕಿತನಾಮವನ್ನು ಕಾಗಿನೆಲೆ ಆದಿಕೇಶವನ್ನಾಗಿ ಇಟ್ಟುಕೊಂಡು ಕೀರ್ತನೆಗಳನ್ನು ರಚಿಸುತ್ತಾ ಜನರಿಗೆ ಭಕ್ತಿಮಾರ್ಗವನ್ನು ಸೂಚಿಸಿದರು.

**ಉದ್ದೇಶ**

೧. ಅವರ ಭಕ್ತಿಮಾರ್ಗದ ಸಾಧನೆಯನ್ನು ತಿಳಿಯಲು.
೨. ಅವರ ಮಹತ್ವವನ್ನು ಅರಿಯಲು.

**ಸಂಶೋಧನಾ ವಿಧಾನ**:

ಈ ಲೇಖನವು ದ್ವಿತೀಯ ದತ್ತಾಂಶವನ್ನಾಧರಿಸಿದೆ. ಇದರಲ್ಲಿನ ವಿಚಾರಗಳು ಕೆಲವು ಪುಸ್ತಕ ಹಾಗೂ ಅಂತರ್ಜಾಲದಿಂದ ಸಂಗ್ರಹಿಸಿರುವುದಾಗಿದೆ.

ಪೂರ್ವ ಕಾಲದಲ್ಲಿ ಆಚಾರ್ಯರ ಸಂಸ್ಕೃತ ಗ್ರಂಥಗಳನ್ನು ಲೌಕಿಕರಿಗೆ {ಸಾಮಾನ್ಯ} ಜನರಿಗೆ ಓದಿ ತಿಳಿಯಲು ಆಗದ ಕಾರಣ ಅವರ ಪರಂಪರೆಯ ನಂತರ ದಾಸ ಸಾಹಿತ್ಯವೆಂಬ ಪರಂಪರೆ ಪ್ರಾರಂಭವಾಯಿತು. ಈ ದಾಸ ಸಾಹಿತ್ಯಕ್ಕೆ ವೈಶಿಷ್ಟ್ಯ, ಮೆರಗುತಂದ ಪಂಡಿತಪೂರ್ಣ ಕವಿಕನಕದಾಸರು.ಇವರು ತಮ್ಮ ಸಹಜ ಬದುಕಿನಿಂದ ಹೊರಬಂದು ತತ್ವಜ್ಞಾನಿಯಾಗಿ, ಸಂತರಾಗಿ, ದಾರ್ಶನಿಕರಾಗಿ, ಕೀರ್ತನಾಕಾರಾಗಿ, ವೈರಾಗಿಯಾಗಿ ಕನ್ನಡನಾಡಿನ ಸಾಂಸ್ಕೃತಿಕ ಪರಂಪರೆಗೆ ಅನನ್ಯ ಕೊಡುಗೆಯನ್ನು ನೀಡಿ ಜನಮಾನಸದಲ್ಲಿ ಕನಕದಾಸರು ಅಜರಾಮರರಾಗಿ ಉಳಿದಿರುವರು.

ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಭಕ್ತಿ ವೈರಾಗ್ಯದಿಂದ ಆ ಶತಮಾನ ಕಾಲದ(೧೫–೧೬) ಸಾಮಾಜಿಕ ಜಾತಿ ಪದ್ಧತಿಯ ನಿರ್ಮೂಲನೆಗೆ ತಮ್ಮ ಕೀರ್ತನೆಗಳಲ್ಲಿ ವಿಡಂಬಿಸಿದ್ದಾರೆ ಹಾಗು ತಿದ್ದುವ ಪ್ರಯತ್ನವನ್ನು ಮಾಡಿದ್ದಾರೆ ತಾವು ರಚಿಸಿದ ಕೀರ್ತನೆಗಳನ್ನು ಹಾಡುತ್ತಾ ಊರೂರು ತಿರುಗಿ ಭಕ್ತಿಯಿಂದ ಏನ್ನುಬೇಕಿದ್ದರು ಗೆಲ್ಲಬಹುದೆಂದು ತೋರಿಸಿ ಕಟ್ಟವರಲ್ಲಿಕನಕದಾಸರು ಒಬ್ಬರು.

ತಮ್ಮ ಸಾಹಿತ್ಯದಲ್ಲಿ ನವರಸಗಳನ್ನು ಉಪಯೋಗಿಸಿ ಕನ್ನಡ ಬಾ಼ಷೆಯಲ್ಲೇ ರಚಿಸುತ್ತಾ ಅದರಲ್ಲು ಭಕ್ತಿರಸಕ್ಕೆ ಹೆಚ್ಚು ಮಹತ್ವವನ್ನು ನೀಡಿ ಸಾಹಿತ್ಯದಲ್ಲಿ ವಿವಿಧ ಪ್ರಕಾರವಾದ ಕೀರ್ತತನೆ,ಸುಳಾದಿಗಳು,

ಉಗಾಭೋಗಗಳು ಮತ್ತು ಕನ್ನಡ ಸಾಹಿತ್ಯ ಲೋಕಕ್ಕೆ ಅವುಗಳನ್ನು ಅರ್ಪಿಸಿರುವುದಲ್ಲದೆ,ಸಂಗೀತ ಪ್ರಪಂಚಕ್ಕೆ ತನ್ನದೆ ಆದಂತಹ ಕೊಡುಗೆಯನ್ನು ಮಂಡಿಗೆಗಳ ರೂಪದಲ್ಲಿ ನೀಡಿರುವರು.ಅವರು ಸುಮಾರು ೩೧೬ಕ್ಕು ಹೆಚ್ಚು ಕೀರ್ತನೆಗಳು ಹಾಗು ಇನ್ನಿತರ ಸಾಹಿತ್ಯಗಳನ್ನು ನೀಡಿರುವರು. ಅವುಗಳಲ್ಲಿ ಮುಖ್ಯವಾದ ಗ್ರಂಥವೆಂದರೆ–ಮೋಹನ ತರಂಗಿಣಿ, ನಳ ಚರಿತ್ರೆ, ಹರಿ ಭಕ್ತಿಸಾರ, ನೃಸಿಂಹಸ್ತವ ಮೊದಲದ ಕೃತಿಗಳನ್ನು ನಾವು ಕಾಣಬಹುದು. ಇವುಗಳಲ್ಲಿ ಎಲ್ಲವು ದೇವ, ಭಕ್ತಿ, ಬದುಕು, ನೀತಿ ಮತ್ತು ಹೇಗೆ ಮಾನವ ಇರಬೇಕೆಂದು ತಿಳಿಸಿರುವರು. ಪ್ರಧಾನವಾಗಿ ಹೇಗೆ ಯಾವ ರೀತಿಯಿಂದ ದೇವರನ್ನು ತಮ್ಮಪರವಶ ಮಾಡಿಕೊಂಡಿದ್ದರೆಂದು ತಿಳಿಯಬಹುದು. ನಮಗೆಲ್ಲರಿಗು ತಿಳಿದಿರುವ ಹಾಗೆ ಅವರು ಉಡುಪಿಗೆ ಹೋಗಿರುವಾಗ ಅಲ್ಲಿಯ ಮಡಿವಂತಿಕೆಯಿಂದ ಅವರಿಗೆ ಭಗವಂತನ ದರ್ಶನ ಭಾಗ್ಯವನ್ನು ಕಲ್ಪಿಸಿ ಕೊಟ್ಟಿರುವುದಿಲ್ಲಾ ಅದಕ್ಕೆ ಅವರು "ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ..." ಎಂದು ಸ್ತುತಿಸಲು ದೇವರು ಗೋಡೆಯನ್ನು ಒಡೆದು ಅವರಿಗೆ ದರ್ಶನ ನೀಡಿರುವರು ಎಂದು ಕೇಳುತ್ತೇವೆ ಹಾಗೆ ಉಡುಪಿಯಲ್ಲಿ ಇಂದು ನಾವು ಈಗಲು ಆ ಜಾಗವನ್ನು ಕಾಣಬಹುದು ಮತ್ತುಅದಕ್ಕೆ 'ಕನಕನಕಿಂಡಿ'ಎಂದೆ ಕರೆಯುತ್ತಾರೆ.

ಇದರಲ್ಲಿಯೆ ನಾವು ಕಾಣಬೇಕು ಕನಕದಾಸರ ಭಕ್ತಿಎಂತಹದ್ದು ಮತ್ತು ದೇವನು ಯಾರಿಗು ಬೇದ ಬಾವವನ್ನು ಮಾಡುವುದೂ ಇಲ್ಲವೆಂದು ತಿಳಿಯ ಬೇಕು. ಅವನಿಗೆ ಎಲ್ಲರು ಸಮಾನರೆಂದು ತಿಳಿದು ಭಕ್ತಿಂದ ನಮಿಸಿದರೆ ಕಂಡಿತವಾಗಿ ಒಲಯುತ್ತಾನೆಂದು ನಂಬಬೇಕು ಆಡಂಬರವನ್ನು ತೊರಯಬೇಕೆಂದು ಅರಿತು ಬದುಕ ಬೇಕು ಎಂದು ಹೇಳುತ್ತಾ ಮುಕ್ತಿಯನ್ನು ಹೊಂದಲು ಅವರು ಯಾವುದೆ ಯೋಗಬಲವಾಗಲಿ, ತಪಸ್ಸನ್ನಾಗಲಿ, ಹೋಮವನ್ನಾಗಲಿ, "ಕುಲ ಕುಲವೆಂದು ಹೊಡೆದಾಡಬೇಡಿ..." ಎಂದು ಹೇಳುತ್ತಾ ಮಡಿವಂತಿಕೆಯನ್ನಾಗಲಿ ಆಚರಿಸದೆ ಕೇವಲ ಭಕ್ತಿಯಿಂದ ಹರಿದಾಸ್ಯವನ್ನು ಸಾಧಿಸಿ ತೋರಿಸಿದ ಮಹಾನ್ ಚೇತನ. ಇಂತಹ ಮಹಾನ್ ವ್ಯಕ್ತಿ ನಮ್ಮ ಕರುನಾಡಿನವರು ಎಂದರೆ ನಾವು ಹೆಮ್ಮೆ ಪಟ್ಟು ಅವರ ದಾರಿಯನ್ನು ಅನುಸರಿಸ ಬೇಕು.

## ಉಪಯೋಗ

೧. ಇಂತಹವರನ್ನು ಅನುಸರಿಸುವುದರಿಂದ ಸುಲಭವಾಗಿ ಭಕ್ತಿ ಮಾರ್ಗವನ್ನು ಕಂಡುಕೊಂಡು ದೇವರನ್ನು ಕಾಣುವ ಪ್ರಯತ್ನವನ್ನು ಮಾಡಬಹುದು.
೨. ಈಗಿನ ಕಾಲದಲ್ಲಿನ ನಮ್ಮ ಭಾರತೀಯ ಸಂಸ್ಕೃತಿಯು ನಶಿಸುತ್ತಿರಲು ಇಂತಹವರ ಗ್ರಂಥವನ್ನು ಓದುವುದರಿಂದ ನಮ್ಮತನವು ಉಳಿಯುತ್ತದೆ.
೩. ಭಾಷಾ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸಬಹುದು.
೪. ಜೀವನವೇನೆಂದು ಅತೀ ಸುಲಭವಾದ ಭಾಷೆಯಲ್ಲಿ ನಾವು ತಿಳಿದು ಕೊಳ್ಳಬಹುದು, ಹಾಗೆ ಮುಂತಾದವುಗಳು.
೫. ಅವರ ಸಾಹಿತ್ಯವನ್ನು ಓದುವುದರಿಂದ ನಮಗೆ ನೀತಿ, ಜ್ಞಾನವೃದ್ಧಿ ಮತ್ತು ಹೇಗೆ ಸಮಾಜದಲ್ಲಿ ವರ್ತಿಸಬೇಕೆಂಬುವ ಹತ್ತು ಹಲವಾರು ವಿಚಾರಗಳು ನಮಗೆ ಲಭಿಸುತ್ತದೆ.

## ಉಪಸಂಹಾರ

ಕನಕದಾಸರೆಂದರೆ ಒಂದು ಶಕ್ತಿ ಅವರಲ್ಲಿನ ಒಳ್ಳೆಯಗುಣವನ್ನು ನಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು, ಹಾಗೆ ಹರಿ ಭಕ್ತಿಯನ್ನು ಜನರಲ್ಲಿ ಮೂಡಿಸಿ ಬೆಳೆಸುವ ಮತ್ತು ಇವರು ಒಬ್ಬ ದೇವರ ಸಂದೇಶವನ್ನು ಜನರಿಗೆ ತಮ್ಮ ಸಂಗೀತ ಮತ್ತು ಸಾಹಿತ್ಯದ ಮೂಲಕ ರವಾನಿಸುವ ಕೆಲಸವನ್ನು ಮಾಡುತ್ತಿದ್ದರು. ಅವರನ್ನು ನಾವುಗಳು ಎಂದಿಗೂ ಮರೆಯಬಾರದು. ಕಾಲದ ಬದಲಾವಣೆಯಿಂದ ನಾವು ಸಾಹಿತ್ಯವನ್ನು ಓದುವುದನ್ನೆ ಮರೆತೆವು, ಹಾಗೂ ಹೊರಗಿನ ಆಕರ್ಷಣೆಗೆ ಬಲಿಯಾಗಿ ಭಕ್ತಿಯಿಂದ ದೇವರನ್ನು ಪೂಜಿಸುವುದನ್ನು ಬಿಟ್ಟೆವು. ಹಿಂದಿನ ಕಾಲದಲ್ಲಿ ಸಾಹಿತ್ಯಕ್ಕೆ, ಕಲೆಗೆ, ಸಂಸ್ಕೃತಿಗೆ ರಾಜರುಗಳು ಪ್ರೋತ್ಸಾಹಿಸುತ್ತಿದ್ದರು ಆದರೆ ಈಗ ಅಳಿವಿನಂಚಿನಲ್ಲಿ ಇರುವ ಹಿಂದಿನ ಕಾಲದ ಸಾಹಿತ್ಯವನ್ನು ಉಳಿಸಲು ಈಗ ಸಮ್ಮೇಳನ, ಕಾರ್ಯಕ್ರಮ, ಕಾರ್ಯಾಗಾರದ ಅವಕಾಶವನ್ನು ಕಲ್ಪಿಸಿ ಸಾಹಿತ್ಯವನ್ನು ಬೆಳೆಸುವ ಪ್ರಯತ್ನವನ್ನು ನಾವುಗಳು ಮಾಡಬೇಕು.

## ಉಲ್ಲೇಖ


1. ಕನಕವಾಣಿ,ಸಂ ಜಗನ್ನಾಥ ರಾವ್ ಪ್ರ; ಕಾಗಿನೆಲೆ ಅಭಿವೃಧಿ ಪ್ರಾಧಿಕಾರ, ಕಾಗಿನೆಲೆ.
2. www.thehindu.com
3. http://www.thehindu.com
4. WWW.Kannada.careeindia.com
5. http://WWW.Kannada.careeindia.com>
6. http://books.google.co.in>
7. http://epoojastore.com>
8. http://kannada.gizbot.com>
9. epaper.vishwavani.news
10. THE HINDU news paper
11. http://www.publicationsdivision.nic.in/b_show.asp?id=857>
12. Kanakadasa-the golden servant of lord Hari(2001)by Basavaraj Naikar ; National book trust ISBN 81-237-3664-9